# GOVERNMENT OF KARNATAKA

No. FD 9 PES 2022 Karnataka Government Secretariat

Vidhana Soudha,
Bengaluru, Dated:16th August 2024.

## NOTIFICATION- IV

Whereas the draft of the following rules further to amend the Karnataka Excise (Brewery) Rules, 1967, was published as required by sub-section (1) of Section 71 of the Karnataka Excise Act, 1965 (Karnataka Act 21 of 1966) in Notification-IV No: FD 9 PES 2022, dated: 09.01.2023 in Part-IV A of the Karnataka Gazette (Extraordinary) No.12 dated:09.01.2023 inviting objections and suggestions from all persons likely to be affected within thirty days from the date of its publication in the official Gazette.

And, whereas the said Gazette was made available to the public on 10th January 2023.

And, whereas no objections and suggestions were received in respect of the said draft by the State Government.

Now, therefore, in exercise of the powers conferred by Section 71 of the Karnataka Excise Act, 1965 (Karnataka Act 21 of 1966), the Government of Karnataka hereby makes the following rules, namely:-

## RULES

**1. Title and commencement.-** (1) These rules may be called the Karnataka Excise (Brewery) (Amendment) Rules, 2024.

(2) They shall come into force from the date of their final publication in the official Gazette.

**2. Amendment of rule 2.-** In the Karnataka Excise (Brewery) Rules, 1967, (hereinafter referred to as the said rules), in rule 2, for clause (o-1), the following shall be substituted, namely:-

"(o-1) "Microbrewery" means a small brewery with an installed capacity not exceeding 3,65,000 litres per annum, in a place having not less than 6,500 sq.ft. built-up area with spacious dining hall and parking facility, where Draught Beer is manufactured and the same is served to their customers for consumption within the premises".

**3. Amendment of rule 27-A.-** In rule 27-A of the said rules;-

(i) for sub-rule (2), the following shall be substituted, namely:-

"(2) The fee for grant or renewal of Microbrewery licence shall be rupees two lakhs per year and an additional licence fee equivalent to fifteen percent of the licence fee. In addition to the licence fee and additional licence fee, the Excise Duty and Additional Excise Duty, as prescribed in Rule 2 (1-A) and Rule 2-AAA of the Karnataka Excise (Excise Duties and Fees) Rules, 1968, shall be paid in advance at the time of grant or renewal of licence".

(ii) in sub-rule (3), for the word "liquor", the words "draught beer", shall be substituted;

(iii) in sub-rule (4), for the word "beer", the words "draught beer", shall be substituted; and

(iv) in sub-rule (5), for the word "beer", the words "draught beer", shall be substituted.

**4. Insertion of new rules 27-B and 27-C.-** After rule 27-A of the said rules, the following new rules shall be inserted, namely:-

**"27-B. Renewal of Microbrewery licence –** The Excise Commissioner on an application made by the licensee accompanied by the licence fee, additional licence fee specified in rule 27-A (2), the Excise Duty and the Additional Excise Duty specified in Rule 2 (1-A) and Rule 2-AAA of the Karnataka Excise (Excise Duties and Fees) Rules, 1968, renew the licence:

Provided that every such application shall be made at least one month before the expiry of the licence already granted;

Provided further that the Excise Commissioner, may accept and consider any such application made after the aforesaid period of one month, if he is satisfied that the applicant had sufficient cause for not making the application within that period".

"**27-C. The Microbrewery licensee-** The Microbrewery licensee under these rules may open up to three additional dispensing counters for serving draught beer for the convenience of the consumers".

**5. Amendment of Form 5.-** In Form 5 of the said Rules, for the word "beer", wherever they occur, the words "draught beer" shall be substituted.

By Order and in the name
of the Governor of Karnataka,

(Manjula Nataraj)
Under Secretary to Government,
Finance Department (Excise)

**ಕರ್ನಾಟಕ ಸರ್ಕಾರ**

ಸಂಖ್ಯೆ: ಆಇ 9 ಪಿಇಎಸ್ 2022

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ:16ನೇ ಆಗಸ್ಟ್ 2024.

**ಅಧಿಸೂಚನೆ–IV**

ಕರ್ನಾಟಕ ಅಬಕಾರಿ (ಬ್ರೀವರಿ) ನಿಯಮಗಳು, 1967 ಅನ್ನು ತಿದ್ದುಪಡಿ ಮಾಡುವ ಕರಡನ್ನು, ಕರ್ನಾಟಕ ಅಬಕಾರಿ ಅಧಿನಿಯಮ, 1965 (1966ರ ಕರ್ನಾಟಕ ಅಧಿನಿಯಮ ಸಂಖ್ಯೆ 21)ರ 71ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಅಧಿಸೂಚನೆ–IV ಸಂಖ್ಯೆ: ಆಇ 09 ಪಿಇಎಸ್ 2022ರ ದಿನಾಂಕ:09.01.2023ನ್ನು ಕರ್ನಾಟಕ (ವಿಶೇಷ) ರಾಜ್ಯಪತ್ರ ಭಾಗ–IVಎ ಸಂಖ್ಯೆ:12, ದಿನಾಂಕ:09.01.2023ರಲ್ಲಿ ಅವುಗಳನ್ನು ಪ್ರಕಟಿಸಿದ ಮೂವತ್ತು ದಿನಗಳೊಳಗಾಗಿ, ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ.

ಮತ್ತು, ಸದರಿ ರಾಜ್ಯಪತ್ರವನ್ನು 10ನೇ ಜನವರಿ, 2023 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ.

ಮತ್ತು, ಸದರಿ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಸ್ವೀಕರಿಸಿಲ್ಲದಿರುವುದರಿಂದ.

ಈಗ, ಆದ್ದರಿಂದ, ಕರ್ನಾಟಕ ಅಬಕಾರಿ ಅಧಿನಿಯಮ, 1965 (1966ರ ಕರ್ನಾಟಕ ಅಧಿನಿಯಮ ಸಂಖ್ಯೆ 21)ರ 71ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

**ನಿಯಮಗಳು**

**1. ಶೀರ್ಷಿಕೆ ಮತ್ತು ಪ್ರಾರಂಭ.**– (1) ಈ ನಿಯಮಗಳನ್ನು ಕರ್ನಾಟಕ ಅಬಕಾರಿ (ಬ್ರೀವರಿ) (ತಿದ್ದುಪಡಿ) ನಿಯಮಗಳು, 2024 ಎಂದು ಕರೆಯತಕ್ಕದ್ದು.

(2) ಅವು, ಕರ್ನಾಟಕ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 2 ನೇ ನಿಯಮದ ತಿದ್ದುಪಡಿ.**– ಕರ್ನಾಟಕ ಅಬಕಾರಿ (ಬ್ರೀವರಿ) ನಿಯಮಗಳು, 1967 ರ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ), 2 ನೇ ನಿಯಮದಲ್ಲಿ, ಖಂಡ (ಂ–1) ರ ಬದಲಾಗಿ, ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"(ಂ–1) "ಮೈಕ್ರೋಬ್ರೀವರಿ" ಎಂದರೆ 6,500 ಚದರ ಅಡಿಗಿಂತ ಕಡಿಮೆ ಇರದ ಸ್ಥಳದಲ್ಲಿ ವಿಶಾಲವಾದ ಭೋಜನಶಾಲೆ ಮತ್ತು ಪಾರ್ಕಿಂಗ್ ಸೌಲಭ್ಯದೊಂದಿಗೆ ವರ್ಷಕ್ಕೆ 3,65,000 ಲೀಟರ್ ಸ್ಥಾಪಿತ ಸಾಮರ್ಥ್ಯ

ಮೀರದಂತೆ ಇರುವ ಸಣ್ಣ ಬ್ರೀವರಿ, ಇದರಲ್ಲಿ ಡ್ರಾಟ್ ಬಿಯರ್‌ನ್ನು ತಯಾರಿಸಲಾಗುತ್ತದೆ ಮತ್ತು ಆವರಣದೊಳಗೆ ಸೇವನೆಗಾಗಿ ಅವರ ಗ್ರಾಹಕರಿಗೆ ಅದನ್ನು ನೀಡಲಾಗುತ್ತದೆ".

**3. 27 ನೇ ನಿಯಮದ ತಿದ್ದುಪಡಿ.–** ಸದರಿ ನಿಯಮಗಳ 27 ನೇ ನಿಯಮದಲ್ಲಿ:–

(i) ಉಪ–ನಿಯಮ (2) ರ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:–

"2. ಮೈಕ್ರೋಬ್ರೀವರಿ ಸನ್ನದು ಮಂಜೂರಾತಿ ಅಥವಾ ನವೀಕರಣಕ್ಕೆ ವಾರ್ಷಿಕ ಸನ್ನದು ಶುಲ್ಕ ರೂ.ಎರಡು ಲಕ್ಷ ರೂಪಾಯಿಗಳು ಮತ್ತು ಸನ್ನದು ಶುಲ್ಕದ ಹದಿನೈದು ಪ್ರತಿಶತಕ್ಕೆ ಸಮಾನವಾದ ಮೊಬಲಗು ಹೆಚ್ಚುವರಿ ಸನ್ನದು ಶುಲ್ಕವಾಗಿದೆ. ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕದ ಜೊತೆಗೆ, ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳು, 1968 ರ ನಿಯಮ 2(1–ಎ) ಮತ್ತು ನಿಯಮ 2–ಎಎಎಯಲ್ಲಿ ನಿಗದಿಪಡಿಸಿದಂತೆ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕವನ್ನು ಸನ್ನದು ಮಂಜೂರಾತಿ ಅಥವಾ ನವೀಕರಣದ ಸಮಯದಲ್ಲಿ ಮುಂಚಿತವಾಗಿ ಪಾವತಿಸತಕ್ಕದ್ದು".

(ii) ಉಪ–ನಿಯಮ (3) ರಲ್ಲಿ, "ಮದ್ಯ" ಎಂಬ ಪದಗಳ ಬದಲಾಗಿ, "ಡ್ರಾಟ್ ಬಿಯರ್", ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು;

(iii) ಉಪ–ನಿಯಮ (4) ರಲ್ಲಿ, "ಬಿಯರ್" ಎಂಬ ಪದಗಳ ಬದಲಾಗಿ, "ಡ್ರಾಟ್ ಬಿಯರ್" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು;

ಮತ್ತು

(iv) ಉಪ–ನಿಯಮ (5) ರಲ್ಲಿ, "ಬಿಯರ್" ಎಂಬ ಪದಗಳ ಬದಲಾಗಿ, "ಡ್ರಾಟ್ ಬಿಯರ್", ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

**4. ಹೊಸ ನಿಯಮಗಳು 27–ಬಿ ಮತ್ತು 27–ಸಿ ರ ಸೇರ್ಪಡೆ.–** ಸದರಿ ನಿಯಮಗಳ 27–ಎ ನಿಯಮದ ತರುವಾಯ, ಈ ಮುಂದಿನ ಹೊಸ ನಿಯಮಗಳನ್ನು ಸೇರಿಸತಕ್ಕದ್ದು, ಎಂದರೆ:–

"**27–ಬಿ. ಮೈಕ್ರೋಬ್ರೀವರಿ ಸನ್ನದು ನವೀಕರಣ** – ಅಬಕಾರಿ ಆಯುಕ್ತರು, ನಿಯಮ 27–ಎ (2) ರಲ್ಲಿ ನಿರ್ದಿಷ್ಟಪಡಿಸಿದ ಸನ್ನದು ಶುಲ್ಕ, ಹೆಚ್ಚುವರಿ ಸನ್ನದು ಶುಲ್ಕ, ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳು, 1968 ರ ನಿಯಮ 2 (1–A) ಮತ್ತು ನಿಯಮ 2–ಎಎಎ ರಲ್ಲಿ ನಿರ್ದಿಷ್ಟಪಡಿಸಿದ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕದ ಪಾವತಿಯೊಂದಿಗೆ ಸನ್ನದುದಾರರು ಸಲ್ಲಿಸಿರುವ ಅರ್ಜಿಯ ಆಧಾರದ ಮೇಲೆ ಸನ್ನದನ್ನು ನವೀಕರಿಸಬಹುದು.

ಪರಂತು, ಅಂತಹ ಪ್ರತಿಯೊಂದು ಅರ್ಜಿಯನ್ನು, ಈಗಾಗಲೇ ನೀಡಿರುವ ಸನ್ನದಿನ ಅವಧಿ ಮುಗಿಯುವ ಕನಿಷ್ಠ ಒಂದು ತಿಂಗಳ ಮುಂಚಿತವಾಗಿ ಸಲ್ಲಿಸತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



ಮತ್ತು ಪರಂತು, ಅಬಕಾರಿ ಆಯುಕ್ತರು, ಒಂದು ತಿಂಗಳ ಅವಧಿಯ ನಂತರ ಮಾಡಿದ ಯಾವುದೇ ಅರ್ಜಿಯನ್ನು, ಆ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸದಿರಲು ಅರ್ಜಿದಾರನಿಗೆ ಸಾಕಷ್ಟು ಕಾರಣಗಳು ಇದೆಯೆಂದು ತೃಪ್ತರಾದರೆ, ಅಂತಹ ಅರ್ಜಿಯನ್ನು ಸ್ವೀಕರಿಸಬಹುದು ಮತ್ತು ಪರಿಗಣಿಸಬಹುದು".

"27–ಸಿ. **ಮೈಕ್ರೋಬ್ರೀವರಿ ಸನ್ನದುದಾರ.**– ಈ ನಿಯಮಗಳ ಅಡಿಯಲ್ಲಿ ಮೈಕ್ರೋಬ್ರೀವರಿ ಸನ್ನದುದಾರರು ಗ್ರಾಹಕರ ಅನುಕೂಲಕ್ಕಾಗಿ ಡ್ರಾಟ್ ಬಿಯರ್ ಅನ್ನು ಪೂರೈಸಲು ಮೂರು ಹೆಚ್ಚುವರಿ ವಿತರಣಾ ಕೌಂಟರ್‌ಗಳನ್ನು ತೆರೆಯಬಹುದು".

**5. ನಮೂನೆ 5 ರ ತಿದ್ದುಪಡಿ.–** ಸದರಿ ನಿಯಮಗಳ ನಮೂನೆ 5 ರಲ್ಲಿ, "ಬಿಯರ್" ಎಂಬ ಪದಗಳು ಎಲ್ಲೆಲ್ಲಿ ಇವೆಯೋ, ಅಲ್ಲಿ, "ಡ್ರಾಟ್ ಬಿಯರ್" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
(ಮಂಜುಳಾ ನಟರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH